ಧಗೆಯಾಗುತ್ತಿತ್ತು. ಕಂಪಿಸುತ್ತಿದ್ದಳು. ಎಲ್ಲದಕ್ಕೂ ಕಿಕ್ ಕಿಕ್ ಕಿಕ್ ಎಂದು ನಗುವ ಬಶೀರ ಪೂರ್ತಿ ಹೆದರಿ ತೆಪ್ಪಗಾಗಿ ಈಗ ಎಲ್ಲಿಂದ ಊಟತರಲಿ ಎಂದು ನೀರು ಬಾಟಲಿ ಅವಳ ಮುಂದೆ ಹಿಡಿದ. ಪಂಕಜ ಎದ್ದು ಆತನ ಕೈಯಲ್ಲಿದ್ದ ಬಾಟಲಿಯನ್ನು ಬೀಸಾಕಿ ಚಪ್ಪಲಿಯನ್ನು ಕಾಲಿಗೆ ತೂರಿಸಿ ಬ್ಯಾಗನ್ನು ಹೆಗಲಿಗೆ ಏರಿಸದೇ ಕೈಯಲ್ಲೇ ಹಿಡಿದುಕೊಂಡು 'ನನಗೆ ಹೋಗಬೇಕು, ಅಡ್ಡಬರಬೇಡ' ಎಂದು ಮೆಟ್ಟಿಲಿಳಿದು 'ಸಿ' ಬ್ಲಾಕಿನಿಂದ ಹೊರಬಂದಳು. ಇನ್ನೂ ಹೆದರಿದ ಬಶೀರ ಅವಳು ಬೀಸಾಡಿದ್ದ ಬಾಟಲಿಯನ್ನು ಎತ್ತುಕೊಂಡು ಅವಳನ್ನು ಹಿಂಬಾಲಿಸಿ 'ನನ್ನ ಮಾತು ಕೇಳು, ನನ್ನ ಮಾತು ಕೇಳು' ಎನ್ನುತ್ತ ಮುಂದೆ ಬಂದು ಅವಳ ಎರಡೂ ಭುಜವನ್ನು ಹಿಡಿದು ತಡೆದ. ಆಗಲೇ ಅವರು 'ಸಿ' ಮತ್ತು 'ಬಿ' ಬ್ಲಾಕಿನ ನಡುವಿನ ಸಂಧಿಗೆ ಬಂದಿದ್ದರು. ಅವರ ತಲೆಯ ಮೇಲೆ ಐದುನೂರು ವೋಲ್ಟಿನ ದೀಪವೊಂದು ಉರಿಯುತ್ತಿದ್ದು ಅದರ ಸುತ್ತ ಹುಳ ಹಾತೆಗಳು ತುಂಬಿ ಆ ಪರಿಸರವೆಲ್ಲವೂ ಹಳದಿಯಾಗಿತ್ತು. ಪಂಕಜ ಮತ್ತೆ ಅದೇ ಜೋರಿನ ಧ್ವನಿಯಲ್ಲಿ 'ಊಟ ಕೊಡೊ ಬೋಳಿಮಗನೆ' ಎಂದು ಕಿರುಚಿಕೊಂಡಳು. 'ಎಲ್ಲಿಂದ ತರಲಿ ಊಟ' ಎಂದು ಮತ್ತೆ ಬಾಟಲಿ ಅವಳ ಮುಂದೆ ಹಿಡಿದು 'ಕೈ ಮುಗಿತೀನಿ ದಯವಿಟ್ಟು ಒಳಗೆ ನಡಿ. ಎರಡು ತಾಸು ಹಿಂದೆ ನನ್ನ ನಿನ್ನ ಹುಡುಕಿಕೊಂಡು ಪೊಲೀಸರು ಬಂದಿದ್ದರು, ನಾವು ಸಿಗಲಿಲ್ಲ. ಬಚಾವ್ ಅಷ್ಟೇ. ನೀನು ಹೀಗೆ ಕೂಗಿಕೊಂಡರೆ ಮಲಗಿದ ಹುಡುಗರೆಲ್ಲಾ ಓಡಿ ಕೆಳಗೆ ಬರ್ತಾರೆ. ಪ್ಲೀಸ್ ಪ್ಲೀಸ್' ಎಂದು ನೀನೇ ಗತಿ ಎಂದು ದೇವರಲ್ಲಿ ಬೇಡುವಂತೆ ಬಶೀರ ತನ್ನ ಎರಡು ಕೈಗಳನ್ನು ಅವಳ ಮುಂದೆ ಚಾಚಿದ. ಪಂಕಜಳೂ 'ಐದು ಗಂಟೆ ಕೂಡಾಕಿ ಹಸಿವಲ್ಲಿ ಸಾಯಿಸಿದಿಯಲ್ಲೋ ಸೂಳಾಮಗನೆ. ಇನ್ನು ಎರಡು ನಿಮಿಷದಲ್ಲಿ ಊಟಕೊಡದೇ ಇದ್ದರೆ ಈ ಮೇಲಿರುವ ಬಲ್ಬ್ ಒಡಿತೇನೆ. ಹಾಸ್ಟೆಲ್‌ನವರೆಲ್ಲ ಕೆಳಗೆ ಬರಲಿ. ಹೋಟೆಲ್ ದುಡ್ಡು ಉಳಿಸಬೇಕಾ... ಮೆಂಟೇನ್ ಮಾಡಕಾಗದೇ ಇದ್ದರೆ ಯಾಕೋ ಕರಕಂಡು ಬರತೀರಾ ಇಲ್ಲೆಲ್ಲಾ. ನನಗೆ ಪೊಲೀಸ್ ಸ್ಟೇಷನ್ ಎಲ್ಲಿದೆ ಅಂತ ಗೊತ್ತು. ನಾನೇ ಹೋಗಿ ಈಗ ಹೇಳ್ತೇನೆ. ಈ ನಾಯಿಗಳೇ ನನ್ನ ಕರೆದುಕೊಂಡು ಬಂದಿದ್ದು ಎಂದು' ಹೀಗೆ ಹೇಳುತ್ತಲೇ ಮತ್ತೆ ಬ್ಯಾಗನ್ನು ಹೆಗಲಿಗೇರಿಸಿ ಹೊರಡಲು ತಯಾರಾದಳು. ಕಣ್ಣಿನ ಪೀಚು, ಕುತ್ತಿಗೆ ಕಂಕುಳಿನ ಬೆವರು, ಮೂಗಿನ ಸಿಂಬಳದ ರುಚಿಹತ್ತಿದ ಹುಳಗಳು ಅವರನ್ನೇ ಸುತ್ತುವರಿಯಲು ಶುರು ಮಾಡಿದ್ದವು. ಸ್ವಲ್ಪ ಬಾಯಿ ತೆಗೆದರೂ ಹಾತೆಯ ಪುಕ್ಕಗಳು ಒಳಗೆ ನುಗ್ಗುವಂತಿದ್ದವು.

ಬಶೀರನಿಗೆ ಏನು ಮಾಡಬೇಕೆಂದು ತಿಳಿಯದೇ ಮತ್ತೆ ಪಂಕಜಳ ಎರಡೂ ಭುಜ ಹಿಡಿದು ಕಣ್ಣಲ್ಲಿ ಕಣ್ಣಿಟ್ಟು 'ಪಂಕಜ ಅಂದರೆ ನಿನಗೆ ಅದರ ಅರ್ಥ ಗೊತ್ತಿದೆಯಾ? ನೀನು ಎಷ್ಟು ಚಂದ ಇದ್ದಿಯಾ ಎನ್ನೋದು ನಿನಗೆ ಗೊತ್ತಿದೆಯಾ? ನಿನ್ನ ದೊಡ್ಡ ಕಣ್ಣು, ತುಟಿ, ಇಮಾಮಿ ಪೌಡರಿನ ಸಂಗಡ ಸೇರಿಕೊಂಡ ನಿನ್ನ ಬೆವರಿನ ಪರಿಮಳ, ಆ ನಿನ್ನ ಅಗಲವಾದ ಹಣೆಯಲ್ಲಿನ ದೊಡ್ಡ ಕುಂಕುಮ... ಥೊ ಥೊ... ನೀನು ಸಾಕ್ಷಾತ್ ಮಹಾಲಕ್ಷ್ಮಿ. ಆದರೆ ಒಂದು. ನೀನು ಈ ರೀತಿ ಸಿಟ್ಟು ಮಾಡಿಕೊಂಡರೆ ಒಂದಿಷ್ಟೂ ಚಂದ ಕಾಣುವುದಿಲ್ಲ' ಎನ್ನುತ್ತಾ ಜಾರಿದ್ದ ಸೆರಗನ್ನು ಇದ್ದ ಜಾಗದಲ್ಲೇ ಏರಿಸುತ್ತಾ ಮತ್ತೆ ಕೈಯಲ್ಲಿದ್ದ ನೀರಿನ ಬಾಟಲಿಯ ಮುಚ್ಚಳ ತೆಗೆದು 'ಪ್ಲೀಸ್ ಇಲ್ಲ ಎಂದು ಹೇಳಬೇಡ ನನ್ನ ಹತ್ತಿರ ಬೇರೆ ಏನೂ ಇಲ್ಲ' ಎನ್ನುತ್ತ ಅವಳ ಆರಿದ ಬಾಯಿಗೆ ನಿಧಾನವಾಗಿ ನೀರೆರೆಯಲು ಶುರುಮಾಡಿದ.

ಪಂಕಜ ಒಂದಿಷ್ಟೂ ವಿರೋಧ ತೋರದೇ ಸುಮಾರು ಅರ್ಧ ಮುಕ್ಕಾಲು ಬಾಟಲಿ ನೀರು ಕುಡಿದು 'ನೀನೂ ಊಟಮಾಡಿದ್ದು ಸುಳ್ಳು' ಎಂದು ಉಳಿದ ನೀರನ್ನು ಬಶೀರನಿಗೆ ಕುಡಿಯಲು ಹೇಳಿದಳು. ಹೈರಾಣಾಗಿದ್ದ ಬಶೀರ ಒಂದೆರಡು ನಿಮಿಷ ಅಲ್ಲೇ ಕುಂತುಬಿಟ್ಟಿದ್ದ. ಪಕ್ಕದಲ್ಲಿದ್ದ ಪಂಕಜ 'ಇಲ್ಲಿ ತುಂಬಾ ಹಾತೆ ಹುಳಗಳು ಬಾ ರೂಮಿನ ಒಳಗೆ ಹೋಗೋಣ' ಎಂದು ಬಶೀರನ ಕೈ ಹಿಡಿದು ಎಳೆದಳು.

ಅಷ್ಟು ಹೊತ್ತಿಗಾಗಲೇ ಬೆಳಗಿನ ಹಾಲಿನ ವ್ಯಾನು ಬಂದು ಹಾಸ್ಟೆಲಿನ ಮುಂದೆ ಪಾಸಾಗಿತ್ತು.